ಫೋಟೋ ತೆಗೆದ ಮೇಲೆ ಮತ್ತೆ ಹಿಂದೆ ನೋಡಿದರೆ ಬೆಕ್ಕು ಅಲ್ಲಿರಲಿಲ್ಲ.

ರೆಕಾರ್ಡು ಬರೆದು ಮುಗಿಸಿ ಸಂದೀಪ ಮಲಗುವಾಗ ರಾತ್ರಿ ಹನ್ನೆರಡು ಗಂಟೆ. ಇನ್ನೇನು ನಿದ್ರಾದೇವಿಯ ಸುತ್ತಲಿನ ಬೇಲಿಗಳನ್ನು ದಾಟಿ ಸರಿಯಾಗಿ ಅವಳನ್ನು ಸಂಧಿಸಬೇಕೆನ್ನುವಷ್ಟರಲ್ಲಿ ಕರ್ಕಶ ಅಲಾರಾಮಿನ ಸದ್ದು. ಭರತ ತನ್ನ ನಿದ್ರೆ ಹಾಳು ಮಾಡಬೇಡ ಎಂಬಂತೆ ಅಸಹನೆಯಲ್ಲಿ ಹೂಂ ಎಂದು ಕನವರಿಸಿದ. ಎಡಗೈಯಲ್ಲಿ ಅಲಾರ್ಮು ಆರಿಸಿ ಎದ್ದು ಕೂತ ಸಂದೀಪನಿಗೆ ನಿದ್ರೆ ಸರಿಯಾಗಿ ಸಿಕ್ಕದ್ದರಿಂದ ಮೈಯೆಲ್ಲಾ ನೋಯುತ್ತಿತ್ತು. ತಲೆ ಧಿಮ್ಮೆನ್ನುತ್ತಿತ್ತು. ನಾನು ಸರಿಯಾಗಿ ನಿದ್ರೆ ಮಾಡಿ ಎಷ್ಟು ದಿನವಾಯಿತು? ಯುಗಯುಗಾಂತರದಿಂದ ಅದೇ ಸ್ಟೋರ್ ರೂಮು, ಅದೇ ಕಾಯಿಮೊಟ್ಟೆ, ಅದೇ ಬೆಂಕಿಪೊಟ್ಟಣ, ಅದೇ ಪೇಪರ್ರು, ಜೀವಮಾನವಿಡೀ ಹೊರಬರದ ಯಾವ ವಿಷವರ್ತುಲದಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ? ಇದರಿಂದ ಯಾವಾಗ ಬಿಡುಗಡೆ? ಒಂದು ಬಕೆಟ್ ಬಿಸಿನೀರಿಗೆ ಇಂಥಾ ಕಟುವಾದ ಶಿಕ್ಷೆಯೇ? ಮಾನವೀಯತೆಯ ಲವಲೇಶವಾದರೂ ಇರುವ ವ್ಯಕ್ತಿ ತನ್ನ ವೈರಿಯನ್ನಾದರೂ ಇಂತಹ ಹಿಂಸಾಕೂಪಕ್ಕೆ ತಳ್ಳುವುದಿಲ್ಲ. ನಾನು ಯಾರಿಗೆ ಯಾವ ಜನ್ಮದಲ್ಲಿ ಬಿಸಿನೀರು ಸಿಗದಂತೆ ಮಾಡಿದ್ದೆ? ರೆಫ್ರಿಜಿರೇಟರಿನಲ್ಲಿಟ್ಟ ಐಸುಗಡ್ಡೆಯಂತೆ ತಣ್ಣಗಾಗಿದ್ದ ನೆಲದ ಮೇಲೆ ಕಾಲೂರಿದ ತಕ್ಷಣ ಒಮ್ಮೆಗೇ ಸಂದೀಪನ ಮೈಯ ನರಗಳೆಲ್ಲಾ ಸೆಟೆದುಕೊಂಡವು. ಈ ಥಂಡಿಯಲ್ಲಿ ಆ ಕಾಯಿಮೊಟ್ಟೆಗಳೂ ನಾವು ಉರಿಯೆವು ಎಂದು ಪ್ರತಿರೋಧ ಹೂಡುತ್ತವೆ. ಏನಿಲ್ಲವೆಂದರೂ ಮೂರು ನ್ಯೂಸ್ ಪೇಪರು, ಹದಿನೈದು ಬೆಂಕಿಕಡ್ಡಿ, ಅರ್ಧ ಗಂಟೆಯ ಶ್ರಮವಾದರೂ ಬೇಕು, ಸಣ್ಣ ಕಿಡಿ ಹೊತ್ತಿಸುವುದಕ್ಕೆ. ಇವತ್ತು ಬೇರೆ ಸಂಜೆಯವರೆಗೆ ಕ್ಲಾಸ್ ಇದೆ, ನಾಳೆಯಿಂದ ಇಂಟರ್ನಲ್ಸು. ನನ್ನ ದೇಹ ಮತ್ತು ಮನಸ್ಸಿಗೆ ವಿಶ್ರಾಂತಿಯೆನ್ನುವುದು ಸಿಗುವುದಾದರೂ ಯಾವಾಗ? ಅವನ ಪಾಡಿಗೆ ಇಂಬು ಕೊಟ್ಟಂತೆ ಭರತನ ಸುಖನಿದ್ರೆಯ ಗೊರಕೆ ಅವನ ಹೊಟ್ಟೆಯಲ್ಲೆಲ್ಲಾ ಚುರುಕ್ಕೆನಿಸುವ ಕೆಟ್ಟ ಹತಾಶೆಯೊಂದನ್ನು ಹುಟ್ಟಿಸಿತು. ತಡೆಯಲಾರದೇ ಅಲ್ಲಿಂದ ಎದ್ದು ಮೆಟ್ಟಿಲುಗಳನ್ನು ಇಳಿದುಕೊಂಡು ಸ್ಟೋರ್ ರೂಮಿನತ್ತ ಹೆಜ್ಜೆ ಹಾಕಿದ. ಅದೇ ಅರಿಹಂತನ ಕೋಣೆ, ನನ್ನ ಜೀವನವನ್ನು ನರಕ ಮಾಡಿದ ರಾಕ್ಷಸನ ಕೋಣೆ. ಒಲೆಯ ಬದಲು ಇವನ ಕೋಣೆಯ ಬಾಗಿಲಿಗೇ ಕಾಯಿಮೊಟ್ಟೆಯನ್ನು ಒಟ್ಟಿ ಬೆಂಕಿ ಕೊಟ್ಟರೆ ಚೆನ್ನಾಗಿರುತ್ತದಲ್ಲವೇ?! ಆ ದುರಿತ ಪರಿಸ್ಥಿತಿಯಲ್ಲೂ ಸಂದೀಪನ ಮುಖದಲ್ಲಿ ಸಣ್ಣದೊಂದು ನಗೆ ಮೂಡಿತು. ಅವನ ಆಲೋಚನೆಗಳು ಕೇಳಿಸಿತೇನೋ ಎಂಬಂತೆ ಒಮ್ಮೆಗೇ ಅರಿಹಂತನ ಕೋಣೆಯ ಬಾಗಿಲು ಸ್ವಲ್ಪ ತೆರೆದುಕೊಂಡಿತು. ಸಂದೀಪ ಗಾಬರಿಯಲ್ಲಿ ಒಮ್ಮೆಗೇ ನಿಂತುಕೊಂಡ. ಅರಿಹಂತ ಅಗುಳಿ ಹಾಕದೇ ಮಲಗಿದ್ದ. ಗಾಳಿಗೆ ಬಾಗಿಲು ಅತ್ತಿತ್ತ ಹೊಯ್ದಾಡುತ್ತಿತ್ತು. ಅವನು ಹಾಗೆಯೇ ಆ ಬಾಗಿಲ ಕಡೆಗೆ ನೋಡುತ್ತಿರುವಾಗಲೇ ಗಾಳಿಯ ವೇಗಕ್ಕೆ ಒಳಗಿನ ಟೇಬಲ್ ಮೇಲೆ ಇಟ್ಟಿದ್ದ ಅರಿಹಂತನ ಆರನೇ ಸೆಮಿಸ್ಟರ್ ಅಂಕಪಟ್ಟಿ ಹಾರಿಕೊಂಡು ಬಂದು ಸಂದೀಪನ ಕಾಲ ಕೆಳಗೆ ಬಿತ್ತು. ಅದರ ಕಡೆಗೊಮ್ಮೆ ನೋಡಿದ ಸಂದೀಪನ ನೋಟದಲ್ಲಿ ಬೇರೆಯದೇನೋ ಆಲೋಚನೆ ಬಂದಿದ್ದನ್ನು ಗಮನಿಸಲು ಅಲ್ಲಿ ಯಾರೂ ಇರಲಿಲ್ಲ. ಒಲೆಯೊಳಗೆ ಕಾಯಿಮೊಟ್ಟೆಗಳ ಜೊತೆಗೆ ಉರಿದು ಬೂದಿಯಾಗುತ್ತಿದ್ದ ಅಂಕಪಟ್ಟಿ ಆರ್ತನಾದ ಮಾಡಿತೋ ಇಲ್ಲವೋ ಗೊತ್ತಿಲ್ಲ, ಬೆಂಕಿಗಂತೂ ಸುಡಬೇಕಾದದ್ದು ಯಾವುದು, ಅಮೂಲ್ಯವಾದುದು ಯಾವುದು ಎಂಬುದನ್ನು ವರ್ಗೀಕರಿಸುವ ವಿವೇಚನೆಯಿರಲಿಲ್ಲ. ಆ ಜ್ವಾಲೆ ಸಂದೀಪನ ಕಣ್ಣಲ್ಲಿ ಪ್ರತಿಫಲಿಸುತ್ತಿದ್ದರೆ ಅವನ ಮುಖದಲ್ಲಿ ಯಾವುದೋ ಕಾಲಕಾಲಗಳ ಸೇಡನ್ನು ತೀರಿಸಿಕೊಂಡ ಸಮಾಧಾನ. ನಾನು ಮಾಡಿದ್ದು ಸರಿ ತಾನೇ? ಎಂದು ಜೋರಾಗಿ ಕೂಗಿದ. ಯಾರೂ ಉತ್ತರಿಸಲಿಲ್ಲ. ನಾನು ಮಾಡಿದ್ದು ಸರಿ ತಾನೇ ಎಂದು ಮತ್ತೊಮ್ಮೆ ಎಂಟು ಟಾಯ್ಲೆಟ್ಟು, ಏಳು ಬಾತ್ರೂಮುಗಳ ಎದುರು ಕಿರುಚಿದ. ಪಕ್ಕದಿಂದ ಮಿಯಾಂವ್ ಎನ್ನುವ ಸದ್ದು ಬಂತು. ಪಕ್ಕಕ್ಕೆ ತಿರುಗಿದರೆ ಇನ್ನೊಂದು ತುದಿಯಲ್ಲಿ ಕರಿ ಬೆಕ್ಕು ನಿಂತಿದೆ. ಇವನತ್ತಲೇ ನೋಡುತ್ತಿದೆ. ಅದರ ಮುಖದಲ್ಲಿ ಸಿಟ್ಟು ಒಲೆಯ ಜ್ವಾಲೆಯಂತೆಯೇ ಉರಿಯುತ್ತಿದೆ. ಇದ್ದಕ್ಕಿದ್ದಂತೇ ಅದು ಮಿಂಚಿನ ವೇಗದಲ್ಲಿ ಇವನತ್ತಲೇ ಎರಗಿ ಬಂತು. ಸಂದೀಪ ಅಯ್ಯೋ ಎಂದು ಕಿರುಚುತ್ತಾ ಕಣ್ಣು ಮುಚ್ಚಿದ.

ಸಂದೀಪನಿಗೆ ಎಚ್ಚರವಾಯಿತು. ಮೊಬೈಲ್ ನೋಡಿದರೆ ನಾಲ್ಕು ಗಂಟೆಗೆ ಇನ್ನೂ ಹತ್ತು ನಿಮಿಷ